## ನಿಯಮ – 72 ರಡಿಯಲ್ಲಿ

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಹೆಚ್.ಪಿ. ಸುಧಾಮ್ ದಾಸ್ ರವರು ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರಿಸುವ ಕುರಿತು.

**ಪ್ರಶ್ನೆ:**

**ಸರ್ಕಾರ ಇತ್ತೀಚೆಗೆ KIADB ಹಂಚಿಕೆದಾರರ ಗುತ್ತಿಗೆ ಕರಾರು ಅವಧಿ ಕಡಿತಗೊಳಿಸಿ, ಎರಡು ವರ್ಷಗಳು ಸತತವಾಗಿ ಕೈಗಾರಿಕಾ ಚಟುವಟಿಕೆ ಕೈಗೊಂಡರೆ ಕ್ರಯಪತ್ರ ವಿತರಿಸುವ ಕ್ರಮವಿರುತ್ತದೆ. KSSIDC ನಿಗಮದ ಹಂಚಿಕೆದಾರರಿಗೂ ಈ ಸೌಲಭ್ಯ ವಿಸ್ತರಿಸಲು ಸ್ವೀಕರಿಸಿದ ಮನವಿಗಳ ಬಗ್ಗೆ ತೆಗೆದುಕೊಂಡ ಕ್ರಮಗಳೇನು? ವಿವರ ನೀಡುವುದು ಹಾಗೂ ಸರ್ಕಾರಿ ಆದೇಶದಂತೆ ಮಳಿಗೆ / ನಿವೇಶನ ಒಟ್ಟು ಮೌಲ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ರಿಯಾಯಿತಿ ನೀಡುವುದಾಗಿದೆ. ಆದರೆ ಮಳಿಗೆ ಅಥವಾ ನಿವೇಶನ ಅಂತಿಮ ಮೌಲ್ಯ ಮತ್ತು ಸರ್ಕಾರಿ ಆದೇಶಗಳಂತೆ ಒಟ್ಟು ವಿಸ್ತೀರ್ಣಕ್ಕೆ ರಿಯಾಯಿತಿ ವಿಸ್ತರಿಸುವಂತೆ ಸ್ವೀಕರಿಸಿದ ಮನವಿಗಳ ಮೇಲೆ ತೆಗೆದುಕೊಂಡ ಕ್ರಮಗಳ ಬಗ್ಗೆ ಮಾನ್ಯ ಸಣ್ಣ ಕೈಗಾರಿಕಾ ಸಚಿವರ ಗಮನ ಸೆಳೆಯ ಬಯಸುತ್ತೇನೆ.**

**ಉತ್ತರ:**

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ-KSSIDC ನಿಗಮದಿಂದ ಪ್ರಸ್ತುತ ಹಂಚಿಕೆ ಪಡೆದಿರುವ ಕೈಗಾರಿಕೋದ್ಯಮಿಗಳು ಬ್ಯಾಂಕ್/ಹಣಕಾಸು ಸಂಸ್ಥೆಗಳಿಂದ ಆರ್ಥಿಕ ನೆರವು ಪಡೆಯಲು ಹಾಗೂ ನಿವೇಶನಗಳನ್ನು ಅಡಮಾನ ಮಾಡಲು ಬ್ಯಾಂಕ್‌ಗಳು ಹಿಂದೇಟು ಹಾಕುತ್ತಿದ್ದ ಕಾರಣದಿಂದ ರಾಜ್ಯದ ಬಂಡವಾಳ ಹೂಡಿಕೆ ಕುಂಠಿತವಾಗುತ್ತಿರುವುದನ್ನು ಪರಿಗಣಿಸಿ ಮತ್ತು ರಾಜ್ಯಕ್ಕೆ ಹೆಚ್ಚಿನ ಬಂಡವಾಳವನ್ನು ಆಕರ್ಷಿಸುವ ದೃಷ್ಟಿಯಿಂದ ಹಂಚಿಕೆ ಪಡೆದ ಘಟಕವು ಕ್ರಯಪತ್ರ ಪಡೆಯಲು ನಿಗದಿಪಡಿಸಿರುವ ಷರತ್ತು ಮತ್ತು ನಿಬಂಧನೆಗಳನ್ನು ಪರಿಷ್ಕರಿಸುವಂತೆ ಕಾಸಿಯಾ (Karnataka Small Scale Industries Association - KASSIA) ಸಂಸ್ಥೆ, ಸ್ಥಳೀಯ ಕೈಗಾರಿಕಾ ಸಂಘಗಳು ಮತ್ತು KSSIDC ಸಂಸ್ಥೆಯಿಂದ ಹಂಚಿಕೆ ಪಡೆದಿರುವ ಹಂಚಿಕೆದಾರರುಗಳು ನಿಗಮಕ್ಕೆ ಮನವಿ ಸಲ್ಲಿಸಿ ಕೋರಿರುತ್ತಾರೆ.

ಸರ್ಕಾರದ ಅಂಗ ಸಂಸ್ಥೆಯಾದ ಕರ್ನಾಟಕ ಕೈಗಾರಿಕ ಪ್ರದೇಶಾಭಿವೃದ್ಧಿ ಮಂಡಳಿ-ಕೆ.ಐ.ಎ.ಡಿ.ಬಿ. ಸಂಸ್ಥೆಯ ವತಿಯಿಂದ ಜಮೀನು ಹಂಚಿಕೆ ಹಾಗೂ ಲೀಸ್ ಕಂ ಸೇಲ್ ಆಧಾರ ಮೇಲೆ ಹಂಚಿಕೆ ಆದ ಜಮೀನಿಗೆ ಕ್ರಯಪತ್ರ ನೆರವೇರಿಸಲು ಸಚಿವ ಸಂಪುಟದ ಅನುಮೋದನೆಯೊಂದಿಗೆ ಸರ್ಕಾರದ ಆದೇಶ ದಿನಾಂಕ 01.01.2022 ರಲ್ಲಿ ಆದೇಶಿಸಿರುವಂತೆ, KSSIDC ನಿಗಮದಿಂದ ಹಂಚಿಕೆ ಪಡೆದಿರುವ ಹಂಚಿಕೆದಾರರುಗಳು ಕ್ರಯಪತ್ರ ಪಡೆಯಲು ನಿಗದಿಪಡಿಸಿರುವ ಷರತ್ತು ಮತ್ತು ನಿಬಂಧನೆಗಳನ್ನು ಪೂರೈಸಿದ ಸಂದರ್ಭದಲ್ಲಿ ಹಾಲಿ ಇರುವ ಗುತ್ತಿಗೆ ಕರಾರು ಪತ್ರದಲ್ಲಿ Abridgement Clause ನ್ನು ಅಳವಡಿಸಿ, ಹಂಚಿಕೆ ಪಡೆದ ನಿವೇಶನ/ಮಳಿಗೆಯಲ್ಲಿ ಉತ್ಪಾದನೆ ಪ್ರಾರಂಭ ಮಾಡಿ ಎರಡು ವರ್ಷಗಳನ್ನು ಪೂರೈಸಿದ ಹಂಚಿಕೆದಾರರುಗಳಿಗೆ ಕ್ರಯಪತ್ರ ನೀಡುವ ಬಗ್ಗೆ ಸಚಿವ ಸಂಪುಟದ ಅನುಮೋದನೆಯನ್ನು ಪಡೆಯುವ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. ಸಚಿವ ಸಂಪುಟದ ಮುಂದೆ ಮಂಡಿಸಿ, ಸಚಿವ ಸಂಪುಟದ ನಿರ್ಣಯದ ಅನುಸಾರ ಮುಂದಿನ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು.

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ಯಮಿಗಳಿಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ-ಕೆ.ಐ.ಎ.ಡಿ.ಬಿ. ಮತ್ತು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ-KSSIDC ಸಂಸ್ಥೆಗಳಿಂದ ಕೈಗಾರಿಕಾ ನಿವೇಶನ / ಮಳಿಗೆಗಳನ್ನು ಶೇ.50%ರ ರಿಯಾಯಿತಿ ದರದಲ್ಲಿ ಕೆಲವೊಂದು ನಿಬಂಧನೆಗೆ ಒಳಪಡಿಸಿ ಹಂಚಿಕೆ ಮಾಡಿ ಸರ್ಕಾರ ದಿ: 27.06.2016 ರಲ್ಲಿ ಅನುಮೋದನೆ ನೀಡಿ ಆದೇಶಿಸಲಾಗಿರುತ್ತದೆ.

..2..

ಮುಂದುವರೆದು, ದಿ: 19.03.2020 ರಂದು ಅಂದಿನ ಮಾನ್ಯ ಉಪ ಮುಖ್ಯಮಂತ್ರಿಯವರು ಹಾಗೂ ಸಮಾಜ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ಯಮಿಗಳಿಗೆ ಕೈಗಾರಿಕಾ ನಿವೇಶನಗಳನ್ನು ಹಾಲಿ ಇರುವ ಸಹಾಯ ಧನ ಮಿತಿಯನ್ನು ಶೇಕಡ 50% ರಿಂದ ಶೇಕಡ 75%ಕ್ಕೆ ಹೆಚ್ಚಿಸಲು ನಿರ್ಧರಿಸಲಾಗಿರುತ್ತದೆ. ಅದರಂತೆ, ಕೆಲವು ಷರತ್ತು ಮತ್ತು ನಿಬಂಧನೆಗಳೊಂದಿಗೆ ಶೇಕಡ 50% ರಿಂದ ಶೇಕಡ 75%ಕ್ಕೆ ಹೆಚ್ಚಿಸಿ ದಿ: 28.05.2020 ರಂದು ಆದೇಶಿಸಲಾಗಿರುತ್ತದೆ. ಮುಂದುವರೆದು, ಶೇಕಡ 75%ಕ್ಕೆ ಹೆಚ್ಚಿಸಿ ಆದೇಶಿಸಿರುವ ದಿ: 28.05.2020 ರಲ್ಲಿನ ಆದೇಶದಲ್ಲಿನ ಷರತ್ತು ಮತ್ತು ನಿಬಂಧನೆಗಳನ್ನು ಮಾರ್ಪಡಿಸಿ, 2019-20ನೇ ಸಾಲಿನಿಂದ KIADB ಹಾಗೂ KSSIDC ಯಿಂದ ಭೂ ಹಂಚಿಕೆ ಪಡೆದಿರುವ ಭೂ ಮಾಲೀಕರಿಗೆ ಪೂರ್ವಾನ್ವಯವಾಗಿ ಶೇ.75% ರಷ್ಟು ಸಹಾಯಧನವನ್ನು ದಿ 01.04.2019 ರಿಂದ ನೀಡುವುದಾಗಿ ತಿದ್ದುಪಡಿ ಆದೇಶವನ್ನು ದಿ: 16.02.2021 ರಲ್ಲಿ ಹೊರಡಿಸಲಾಗಿದೆ.

ಆದ್ದರಿಂದ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮವು ಮಳಿಗೆ / ನಿವೇಶನಗಳನ್ನು ಹಂಚಿಕೆ ಮಾಡುವಾಗ, ಹಂಚಿಕೆ ಪತ್ರದಲ್ಲಿ ವಿಸ್ತೀರ್ಣ ಮತ್ತು ನಿವೇಶನ / ಮಳಿಗೆ ಮೌಲ್ಯ ನಮೂದಿಸಿ, ಚಾಲ್ತಿ ಸರ್ಕಾರದ ಆದೇಶದಂತೆ ಅರ್ಹವಿರುವ ಸಹಾಯಧನವನ್ನು ಸ್ಪಷ್ಟವಾಗಿ ಉಲ್ಲೇಖಿಸಿ, ಬಾಕಿ ಮೌಲ್ಯವನ್ನು ಹಂಚಿಕೆದಾರರಿಂದ ಪಾವತಿಸಿಕೊಳ್ಳಲಾಗುತ್ತಿದೆ.

(ಶರಣಬಸಪ್ಪ ದರ್ಶನಾಪೂರ)
ಸಣ್ಣ ಕೈಗಾರಿಕೆ ಮತ್ತು
ಸಾರ್ವಜನಿಕ ಉದ್ದಿಮೆಗಳ ಸಚಿವರು

ಸಿಐ 72 ಸಿಎಸ್ ಸಿ 2024